ಕನ್ನಡಪ್ರಭ
ಸಂಪಾದಕೀಯ

# ಅತ್ಯಾಚಾರ ಕೇಸ್‌ಗಳ ತನಿಖೆಗೆ 2 ತಿಂಗಳ ಗಡುವು: ಸೂಕ್ತ ನಿರ್ಧಾರ

ಅತ್ಯಾಚಾರ ಪ್ರಕರಣಗಳ ತನಿಖೆಯನ್ನು ಪೊಲೀಸರು ದೂರು ದಾಖಲಿಸಿಕೊಂಡ ಎರಡು ತಿಂಗಳೊಳಗೆ ಪೂರ್ಣಗೊಳಿಸಬೇಕು ಎಂದು ಕೇಂದ್ರ ಗೃಹ ಸಚಿವಾಲಯ ಮಹತ್ವದ ಮಾರ್ಗಸೂಚಿ ಬಿಡುಗಡೆ ಮಾಡಿದೆ. ಅತ್ಯಾಚಾರವೆಂಬ ಸಾಮಾಜಿಕ ಪಿಡುಗನ್ನು ನಿಯಂತ್ರಿಸಲು ದೇಶದಲ್ಲಿ ಇಲ್ಲಿಯವರೆಗೆ ಕೈಗೊಂಡ ಯಾವ ಕ್ರಮಗಳೂ ನಿರೀಕ್ಷಿತ ಫಲ ನೀಡದೆ ವರ್ಷದಿಂದ ವರ್ಷಕ್ಕೆ ಮಹಿಳೆಯರ ಮೇಲಿನ ದೌರ್ಜನ್ಯ ಹೆಚ್ಚುತ್ತಲೇ ಇರುವ ಹಿನ್ನೆಲೆಯಲ್ಲಿ ಇದು ಇನ್ನೊಂದು ಧನಾತ್ಮಕ ಪ್ರಯತ್ನವೆಂದೇ ಹೇಳಬೇಕು. ಪೊಲೀಸರು ಮಾಡುವ ವಿಳಂಬ ಅಥವಾ ಪ್ರಭಾವಿಗಳ ಒತ್ತಡದ ಹಿನ್ನೆಲೆಯಲ್ಲಿ ಅತ್ಯಾಚಾರ ಸಂತ್ರಸ್ತೆಯರು ಇನ್ನಷ್ಟು ಕಷ್ಟ ಅನುಭವಿಸುವುದನ್ನು ತಪ್ಪಿಸಲು ಹಾಗೂ ಆದ್ಯತೆಯ ಮೇಲೆ ಪೊಲೀಸರು ಅತ್ಯಾಚಾರ ಪ್ರಕರಣಗಳನ್ನು ತನಿಖೆ ನಡೆಸುವಂತೆ ಮಾಡಲು ಇದೊಂದು ಸೂಕ್ತ ನಿರ್ಧಾರವೂ ಹೌದು. ಎಫ್‌ಐಆರ್ ದಾಖಲಿಸಿದ ನಂತರ ಎರಡು ತಿಂಗಳಿನಲ್ಲಿ ತನಿಖೆ ಪೂರ್ಣಗೊಳಿಸುವುದು ಅಂದರೆ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸುವುದು. ಅದಕ್ಕಿಂತ ಮುನ್ನ ತನಿಖೆಯ ಎಲ್ಲಾ ಪ್ರಕ್ರಿಯೆಗಳು ಮುಗಿದಿರಬೇಕು. ಅಂದರೆ ಇನ್ನುಮುಂದೆ ಅತ್ಯಾಚಾರ ನಡೆದು ಎರಡು ತಿಂಗಳೊಳಗೆ ನ್ಯಾಯಾಲಯದಲ್ಲಿ ವಿಚಾರಣೆಯ ಪ್ರಕ್ರಿಯೆ ಆರಂಭವಾಗುತ್ತದೆ. ಅತ್ಯಾಚಾರ ಪ್ರಕರಣಗಳ ವಿಚಾರಣೆಗೆಂದೇ ದೇಶದ ಹಲವು ರಾಜ್ಯಗಳಲ್ಲಿ ತ್ವರಿತ ನ್ಯಾಯಾಲಯಗಳಿವೆ. ಹೀಗಾಗಿ ಈ ಪ್ರಕರಣಗಳಲ್ಲಿ ಇನ್ನುಮುಂದೆ ಮೊದಲಿಗಿಂತ ವೇಗವಾಗಿ ತೀರ್ಪುಗಳೂ ಬರಬಹುದು. ತನಿಖೆ ಹಾಗೂ ವಿಚಾರಣೆಯಲ್ಲಿ ಇಲ್ಲಿಯವರೆಗೆ ಆಗುತ್ತಿದ್ದ ವಿಳಂಬದಿಂದ ನಾನಾ ಸಮಸ್ಯೆಗಳು ಎದುರಾಗುತ್ತಿದ್ದವು. ಮೊದಲನೆಯದಾಗಿ, ಸಂತ್ರಸ್ತೆಗೆ ನ್ಯಾಯ ದೊರೆಯುವುದು ವಿಳಂಬವಾಗುತ್ತಿತ್ತು. ಎರಡನೆಯದಾಗಿ, ಹೇಯ ಕೃತ್ಯ ಎಸಗಿದ್ದರೂ ಆರೋಪಿ ಜಾಮೀನು ಪಡೆದು ಹೊರಗೆ ಓಡಾಡಿಕೊಂಡಿರುವ ಅಥವಾ ಕಠಿಣ ಶಿಕ್ಷೆಯಿಲ್ಲದೆ ಜೈಲಿನಲ್ಲಿ ಹಾಯಾಗಿರುವ ಸಾಧ್ಯತೆಯಿರುತ್ತಿತ್ತು. ಮೂರನೆಯದಾಗಿ, ಅತ್ಯಾಚಾರದ ದೂರುಗಳಲ್ಲಿ ನಕಲಿ ದೂರುಗಳೂ ದೊಡ್ಡ ಪ್ರಮಾಣದಲ್ಲೇ ಇರುವುದರಿಂದ ಮುಗ್ಧ ಆರೋಪಿಗಳು ಜೈಲಿನಲ್ಲಿ ಕೊಳೆಯುವಂತಾಗುತ್ತಿತ್ತು ಅಥವಾ ಕಳಂಕಿತರಾಗಿ ಸಮಾಜದಲ್ಲಿ ಬದುಕಬೇಕಿತ್ತು. ತನಿಖೆ ವೇಗವಾಗಿ ಪೂರ್ಣಗೊಂಡರೆ ಈ ಎಲ್ಲ ಸಮಸ್ಯೆಗಳಿಗೂ ಒಂದಷ್ಟು ಪರಿಹಾರ ಸಿಗಲಿದೆ. ಜೊತೆಗೆ, ಅತ್ಯಾಚಾರ ಎಸಗಿದರೆ ಕೂಡಲೇ ಶಿಕ್ಷೆಯಾಗುತ್ತದೆ ಎಂಬ ಭೀತಿ ಅತ್ಯಾಚಾರದ ಮನಸ್ಥಿತಿಯುಳ್ಳವರನ್ನು ಆ ಕೃತ್ಯದಿಂದ ದೂರಕ್ಕೆಳೆಯುವ ಸಾಧ್ಯತೆಯೂ ಇರುತ್ತದೆ.

**ಗಡುವಿನ ಒತ್ತಡದ ಹಿನ್ನೆಲೆಯಲ್ಲಿ ಪೊಲೀಸರು ಬಿ ರಿಪೋರ್ಟ್ ಹಾಕಿ ಆರೋಪಿಗಳನ್ನು ಬಿಟ್ಟುಬಿಡುವ ಪರಿಪಾಠ ಹೆಚ್ಚದಂತೆ ನೋಡಿಕೊಳ್ಳುವುದೂ ಬಹಳ ಮುಖ್ಯ.**

ಅತ್ಯಾಚಾರದ ತನಿಖೆಯನ್ನು ಎರಡು ತಿಂಗಳೊಳಗೆ ಪೂರ್ಣಗೊಳಿಸಬೇಕು ಎಂಬುದರ ಜೊತೆಗೆ ಲೈಂಗಿಕ ದೌರ್ಜನ್ಯದ ವಿಷಯದಲ್ಲಿ ಕಾನೂನನ್ನು ಬಲಗೊಳಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರಗಳಿಗೆ ಕೆಲ ಮಹತ್ವದ ಸಲಹೆಗಳನ್ನೂ ಕೇಂದ್ರ ಸರ್ಕಾರ ನೀಡಿದೆ. ಸಂತ್ರಸ್ತೆಯ ಮರಣಪೂರ್ವ ಹೇಳಿಕೆಯನ್ನು ಮ್ಯಾಜಿಸ್ಟ್ರೇಟ್ ಮುಂದೆಯೇ ದಾಖಲಿಸಿಕೊಳ್ಳಬೇಕು ಎಂಬ ನಿಯಮ ಬದಲಿಸಿ ಅದನ್ನು ರೆಕಾರ್ಡ್ ಮಾಡಿಕೊಂಡು ಕೋರ್ಟ್‌ಗೆ ಹಾಜರುಪಡಿಸಿದರೂ ಸಾಕು ಎಂಬ ತಿದ್ದುಪಡಿ ಮಾಡುವಂತೆ ರಾಜ್ಯಗಳಿಗೆ ಸೂಚಿಸಿದೆ. ಜೊತೆಗೆ, ಲೈಂಗಿಕ ದೌರ್ಜನ್ಯಕ್ಕೆ ಸಂಬಂಧಪಟ್ಟ ದೂರನ್ನು ಠಾಣೆಯ ಸರಹದ್ದಿನ ನೆಪ ಹೇಳದೆ ಯಾವ ಠಾಣೆಯಲ್ಲಿ ಬೇಕಾದರೂ ದಾಖಲಿಸಿಕೊಳ್ಳಬೇಕು ಎಂದು ಸೂಚಿಸಿದೆ. ಕರ್ನಾಟಕದಂತಹ ಕೆಲ ರಾಜ್ಯಗಳಲ್ಲಿ ಎಲ್ಲ ಅಪರಾಧಗಳಿಗೂ ಅನ್ವಯಿಸುವಂತೆ ಇಂತಹದ್ದೊಂದು ನಿಯಮ ಈಗಾಗಲೇ ಇದೆ. ಆದರೆ, ಠಾಣಾಧಿಕಾರಿಗಳು ಇದನ್ನು ಸರಿಯಾಗಿ ಜಾರಿಗೊಳಿಸದೆ ನಿಯಮ ವ್ಯರ್ಥವಾಗಿರುವ ನಿದರ್ಶನಗಳೂ ಸಾಕಷ್ಟಿವೆ. ಕನಿಷ್ಠ ಪಕ್ಷ ಅತ್ಯಾಚಾರದ ವಿಷಯದಲ್ಲಾದರೂ ಪೊಲೀಸರು ಅಸೂಕ್ಷ್ಮವಾಗಿ ನಡೆದುಕೊಳ್ಳುವುದನ್ನು ನಿಲ್ಲಿಸಬೇಕು. ಆಗ ಬದಲಾವಣೆ ಸಾಧ್ಯವಿದೆ. ಇನ್ನುಳಿದಂತೆ ಈಗಾಗಲೇ ಸಿಆರ್‌ಪಿಸಿ ಮತ್ತು ಐಪಿಸಿ ಅಡಿ ಇರುವ ಕೆಲವು ನಿಯಮಗಳನ್ನೇ ಕಟ್ಟುನಿಟ್ಟಾಗಿ ಜಾರಿಗೊಳಿಸುವಂತೆ ಕೇಂದ್ರ ಸರ್ಕಾರ ಸೂಚಿಸಿದೆ.

ಮಹತ್ವದ ಸಂಗತಿ ಏನೆಂದರೆ, ಎರಡು ತಿಂಗಳ ಗಡುವು ಎಂಬುದು ಅತ್ಯಾಚಾರ ಪ್ರಕರಣಗಳಲ್ಲಿ ಪೊಲೀಸರು ಹೆಚ್ಚೆಚ್ಚು ಬಿ ರಿಪೋರ್ಟ್ ಸಲ್ಲಿಸಿ ಆರೋಪಿಯನ್ನು ಬಿಟ್ಟುಬಿಡುವುದಕ್ಕೆ ಪ್ರೇರಣೆಯಾಗಬಾರದು. ಒಂದೆಡೆ ಸಾಕ್ಷ್ಯಗಳು ಸಿಗುತ್ತಿಲ್ಲ, ಇನ್ನೊಂದೆಡೆ ಗಡುವು ಮುಗಿಯುತ್ತಿದೆ ಎಂಬ ಒತ್ತಡ ಪೊಲೀಸರ ಮೇಲೆ ನಿರ್ಮಾಣವಾದರೆ ಆರೋಪದಲ್ಲಿ ಹುರುಳಿಲ್ಲ ಎಂಬ ಬಿ ರಿಪೋರ್ಟ್ ಸಲ್ಲಿಕೆಗೆ ಅದೇ ನೆಪವಾಗಬಹುದು. ಹಾಗಾದಂತೆ ನೋಡಿಕೊಂಡು, ಕೇಂದ್ರ ಸರ್ಕಾರದ ಮಾರ್ಗಸೂಚಿಗಳು ಸಮಾಜದಲ್ಲಿ ಧನಾತ್ಮಕ ಬದಲಾವಣೆ ತರುವಂತೆ ನೋಡಿಕೊಳ್ಳುವ ಜವಾಬ್ದಾರಿ ರಾಜ್ಯಗಳ ಮೇಲಿದೆ.